ಭಕ್ತಿ ಪಾತ್ರಗಳ ನಿರ್ವಹಣೆಯಲ್ಲಿ ಎತ್ತಿದ ಕೈಯಾದ ರಾಜ್, ಅಭಿಮಾನಿಗಳನ್ನು ದೇವರು ಎಂದು ಕರೆದವರು; ನಿರ್ಮಾಪಕರನ್ನು ಅನ್ನದಾತ ಎಂದು ಗೌರವಿಸಿದವರು. ರಾಜ್‌ಕುಮಾರ್ ಲಕ್ಷಾಂತರ ಕನ್ನಡಿಗರ ಪಾಲಿಗೆ ಕನ್ನಡಮೇಷ್ಟ್ರು. ತಲೆಮಾರುಗಳ ಪಾಲಿಗೆ ಕೌಟುಂಬಿಕ ಮೌಲ್ಯಗಳ ಮಾದರಿ. ನಟನೊಬ್ಬ ತನ್ನ ಪಾತ್ರಗಳ ಮೂಲಕ ಜನಮಾನಸದ ಮೇಲೆ ಬೀರಬಹುದಾದ ಆತ್ಯಂತಿಕ ಪ್ರಭಾವಕ್ಕೆ ರಾಜ್ ಮಾದರಿಯಂತಿದ್ದಾರೆ. ಗೋಕಾಕ್ ಚಳವಳಿಗೆ ಶಕ್ತಿ ತುಂಬುವ ಮೂಲಕ ರಾಜ್ ಹಾಗೂ ಕನ್ನಡದ ನಂಟು ಮತ್ತಷ್ಟು ಗಾಢವಾಯಿತು.

ಕಾಡುಗಳ್ಳ ವೀರಪ್ಪನ್‌ನಿಂದ ಅಪಹರಣಕ್ಕೊಳಗಾಗಿ 108 ದಿನಗಳ ಕಾಲ ಕಾಡಿನಲ್ಲಿ ವಾಸಿಸಬೇಕಾದ ಸಮಯದಲ್ಲಿ ಕರ್ನಾಟಕದಲ್ಲಿ ಉಂಟಾದ ತಳಮಳ, ರಾಜ್ ಕನ್ನಡಿಗರನ್ನು ಯಾವ ರೀತಿ ಆವರಿಸಿಕೊಂಡಿದ್ದಾರೆ ಎನ್ನುವುದರ ನಿದರ್ಶನದಂತಿತ್ತು.

ರಾಜ್‌ರ ಸಾಧನೆಯ ಹಿಂದಿನ ಶಕ್ತಿಯ ರೂಪದಲ್ಲಿ ಗುರ್ತಿಸಬಹುದಾದ ಪಾರ್ವತಮ್ಮ ರಾಜ್‌ಕುಮಾರ್ ಹಾಗೂ ಈ ದಂಪತಿಯ ಮೂವರು ಮಕ್ಕಳಾದ ಶಿವರಾಜಕುಮಾರ್, ರಾಘವೇಂದ್ರ ರಾಜಕುಮಾರ್ ಹಾಗೂ ಪುನೀತ್ ರಾಜಕುಮಾರ್ ಕೂಡ ರಾಜ್ ಮೂಲಕ ಕನ್ನಡ ಚಿತ್ರರಂಗಕ್ಕೆ ಸಂದಿರುವ ಕೊಡುಗೆಯೇ ಆಗಿದ್ದಾರೆ.



'ಬೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ವಿಷ್ಣುವರ್ಧನ್

## ಒಂದೇ ಕೊಂಬೆಯ ಹೂಗಳು!

ಆಯಾಮ ಎರಡು

**ಒಂದೆಡೆ** ಕನ್ನಡ ಚಿತ್ರರಂಗದ ಎಲ್ಲೆಕಟ್ಟುಗಳನ್ನು ರಾಜ್‌ಕುಮಾರ್ ವಿಸ್ತರಿಸುತ್ತಿರುವಾಗ, ಇನ್ನೊಂದೆಡೆ ಆ ಪ್ರಯತ್ನಕ್ಕೆ ಕೈಜೋಡಿಸುವ ಮೂಲಕ ಜನಮನ್ನಣೆ ಗಳಿಸಿದ ಕಲಾವಿದರ ಬಳಗವೊಂದಿದೆ. ಆ ಕಲಾವಿದರಲ್ಲಿ ಮುಖ್ಯರಾದವರು – ವಿಷ್ಣುವರ್ಧನ್, ಅಂಬರೀಷ್, ಶಂಕರ್‌ನಾಗ್ ಹಾಗೂ ಅನಂತನಾಗ್.

ಬಿ.ವಿ. ಕಾರಂತ, ಗಿರೀಶ ಕಾರ್ನಾಡರ ನಿರ್ದೇಶನದ 'ವಂಶವೃಕ್ಷ' ಚಿತ್ರದಲ್ಲಿನ ಪುಟ್ಟ ಪಾತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ವಿಷ್ಣುವರ್ಧನ್, ಪುಟ್ಟಣ್ಣ ಕಣಗಾಲ್‌ರ 'ನಾಗರಹಾವು' (1973) ಸಿನಿಮಾದಲ್ಲಿ ರಾಮಾಚಾರಿ ಪಾತ್ರದ ಮೂಲಕ ಕನ್ನಡ ಚಿತ್ರರಸಿಕರ ಮನಸ್ಸಿನಲ್ಲಿ ನೆಲೆನಿಂತರು; ವೈವಿಧ್ಯಮಯ ಪಾತ್ರಗಳ ಮೂಲಕ ತಾರಾವರ್ಚಸ್ಸಿನ ನಾಯಕನಟನಾಗಿ ಬೆಳೆದುನಿಂತರು. ಸ್ಫುರದ್ರೂಪದಿಂದ ಚಿತ್ರರಸಿಕರ ಮನಸ್ಸು ಸೆಳೆದ ವಿಷ್ಣುವರ್ಧನ್, ರಾಜ್‌ಕುಮಾರ್ ನಂತರದ ಅತ್ಯಂತ ಜನಪ್ರಿಯ ನಟ ಹಾಗೂ ಇನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದವರು. 'ನಾಗರಹಾವು', 'ಬಂಗಾರದ ಗುಡಿ', 'ಹೊಂಬಿಸಿಲು', 'ಜಿಮ್ಮಿಗಲ್ಲು', 'ಸಾಹಸಸಿಂಹ', 'ಕರ್ಣ', 'ಬಂಧನ', 'ಬೂತಯ್ಯನ ಮಗ ಅಯ್ಯು', 'ಮುತ್ತಿನಹಾರ', 'ಮಲಯ ಮಾರುತ', 'ಸುಪ್ರಭಾತ', 'ಲಾಲಿ', 'ಯಜಮಾನ', 'ಆಪ್ತಮಿತ್ರ', 'ಆಪ್ತರಕ್ಷಕ' ವಿಷ್ಣು ಅವರ ಕೆಲವು ಜನಪ್ರಿಯ ಸಿನಿಮಾಗಳು. ನಟಿ ಭಾರತಿ ವಿಷ್ಣುವರ್ಧನ್‌ರ ಪತ್ನಿ.

## ಡಬ್ಬಿಂಗ್: ಬಿತ್ತಿದ ಬೀಜ ವಿಷವೃಕ್ಷವಾಗಿ...

೯೦ ಕನ್ನಡ ಸಿನಿಮಾ

ಆಯಾಮ ಮೂರು

**ಡಬ್ಬಿಂಗ್** ಹಾಗೂ ಕನ್ನಡ ಚಿತ್ರರಂಗದ್ದು ವಿಚಿತ್ರ ಸಂಬಂಧ. ಡಬ್ಬಿಂಗ್ ವಿರುದ್ಧ ಚಳವಳಿಯನ್ನು ಸಂಘಟಿಸಿದ್ದ ಚಿತ್ರೋದ್ಯಮ ಹಾಗೂ ಚಿತ್ರರಸಿಕರು, ನಂತರದ ದಿನಗಳಲ್ಲಿ ಡಬ್ಬಿಂಗ್ ಬೇಕು ಎಂದು ಹೋರಾಟ ನಡೆಸಿದ ವಿರೋಧಾಭಾಸಕ್ಕೆ ಕರ್ನಾಟಕ ಸಾಕ್ಷಿಯಾಗಿದೆ. ಡಬ್ಬಿಂಗ್ ವಿದ್ಯಮಾನದ ವಿಚಿತ್ರದೊಳಗಿನ ವಿಚಿತ್ರ: ದೇಶದಲ್ಲಿ ಡಬ್ಬಿಂಗ್ ಶಕೆ ಆರಂಭವಾದುದು ಕನ್ನಡಿಗರ ಮೂಲಕ ಎನ್ನುವುದು. ಆರ್. ನಾಗೇಂದ್ರ ರಾವ್ ಅವರು ನಿರ್ದೇಶಿಸಿದ್ದ 'ಹರಿಶ್ಚಂದ್ರ' (1943) ಚಿತ್ರದ ಶತದಿನ ಸಮಾರಂಭ ಧಾರವಾಡದಲ್ಲಿ ನಡೆಯುತ್ತಿದ್ದಾಗ, ಥಿಯೇಟರ್ ಮಾಲೀಕರೊಬ್ಬರು 'ಈ ಚಿತ್ರವನ್ನು ಹಿಂದಿಗೆ ಯಾಕೆ ಡಬ್ ಮಾಡಬಾರದು?' ಎಂದರು. ನಾಗೇಂದ್ರರಾಯರಿಗೂ ಸರಿಯೆನ್ನಿಸಿತು. ಡಬ್ ಮಾಡುವುದಾದರೆ ತಮಿಳಿಗೇ ಮಾಡೋಣ ಎಂದರು ಸಿನಿಮಾದ ನಿರ್ಮಾಪಕರು. ಆವರೆಗೆ ಭಾರತದಲ್ಲಿ ಯಾವ ಚಿತ್ರವೂ ಇನ್ನೊಂದು ಭಾಷೆಗೆ ಡಬ್ ಆಗಿರಲಿಲ್ಲ. ಆ ಅಳುಕಿನಲ್ಲೇ, ರಾಯರು ಎ.ಟಿ. ಕೃಷ್ಣಸ್ವಾಮಿ ಅಯ್ಯಂಗಾರ್ ಅವರ ಜೊತೆಗೂಡಿ ತಮಿಳಿನಲ್ಲಿ ಒಂದು ಸೀನ್ ಬರೆದು, ಅದನ್ನು ಚಂದ್ರಮತಿ ಪಾತ್ರದ ಲಕ್ಷ್ಮೀಬಾಯಿ ಅವರಿಗೆ ಅಭ್ಯಾಸ ಮಾಡಿಸಿದರು. ಆ ದೃಶ್ಯವನ್ನು ಡಬ್ ಮಾಡಿ ನೋಡಲಾಯಿತು. ತುಟಿ ಚಲನೆಯಲ್ಲಿ ವ್ಯತ್ಯಾಸ ಕಾಣಿಸಲಿಲ್ಲ. ಚಿತ್ರತಂಡದಲ್ಲಿ ರೋಮಾಂಚನ, ಹಿಗ್ಗು. ಇಡೀ ಚಿತ್ರದ ಡಬ್ಬಿಂಗ್ ಮುಗಿಯುವುದರೊಂದಿಗೆ ಹೊಸ ದಾಖಲೆಯೊಂದು ಸೃಷ್ಟಿಯಾಯಿತು. ಕನ್ನಡದ 'ಹರಿಶ್ಚಂದ್ರ' ತಮಿಳಿಗೆ ಡಬ್ ಆಗುವ ಮೂಲಕ ಭಾರತೀಯ ಚಲನಚಿತ್ರ ರಂಗದಲ್ಲಿ ಡಬ್ಬಿಂಗ್ ಶಕೆ ಆರಂಭಗೊಂಡಿತು. ಹೀಗೆ, ದೇಶದಲ್ಲಿ ಸಿನಿಮಾ ಡಬ್ಬಿಂಗ್ ಪ್ರಕ್ರಿಯೆಗೆ ಶ್ರೀಕಾರ ಹಾಡಿದ ಕನ್ನಡ ಚಿತ್ರರಂಗವೇ ನಂತರದ ದಿನಗಳಲ್ಲಿ ಡಬ್ಬಿಂಗ್ ವಿರೋಧಿ ನಿಲುವು ತಳೆಯಿತು.

ಅರವತ್ತರ ದಶಕದ ಕನ್ನಡ ಚಿತ್ರಗಳು ಕಡಿಮೆ ಸಂಖ್ಯೆಯಲ್ಲಿ ತಯಾರಾಗುತ್ತಿದ್ದ ಕಾಲ. ಕನ್ನಡ ಚಿತ್ರಗಳನ್ನಷ್ಟೇ ನೆಚ್ಚಿಕೊಂಡು ಚಿತ್ರಮಂದಿರಗಳನ್ನು ನಡೆಸಲು ಸಾಧ್ಯವಿಲ್ಲದ ಆ ದಿನಗಳಲ್ಲಿ, ಚಿತ್ರಮಂದಿರಗಳಿಗೆ ಸಿನಿಮಾಗಳನ್ನು ಪೂರೈಸುವ ಕಾರಣಕ್ಕಾದರೂ ಡಬ್ಬಿಂಗ್ ಅನಿವಾರ್ಯವಾಗಿತ್ತು. ಆದರೆ, ಚಿತ್ರೋದ್ಯಮ ಬೆಳೆಯುತ್ತಾ ಹೋಗಿ,



ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ ಆರ್. ನಾಗೇಂದ್ರ ರಾವ್